
2 Chapter
ಅಧ್ಯಾಯ-ಎರಡು
ಕರ್ನಾಟಕದಲ್ಲಿ ಶೈಕ್ಷಣಿಕ ಪರಂಪರೆ
- ಪ್ರಮುಖ ಶಿಕ್ಷಣ ಸಂಸ್ಥೆಗಳು

## ಅಧ್ಯಾಯ –ಎರಡು

# ಕರ್ನಾಟಕದಲ್ಲಿ ಶೈಕ್ಷಣಿಕ ಪರಂಪರೆ – ಪ್ರಮುಖ ಶಿಕ್ಷಣ ಸಂಸ್ಥೆಗಳು

### ೨.೧ ಸ್ವಾತಂತ್ರ್ಯ ಪೂರ್ವದ ಕರ್ನಾಟಕದ ಸ್ಥಿತಿಗತಿ :

"ಜ್ಞಾನದ ಬಲದಿಂದ ಅಜ್ಞಾನದ ಕೇಡು" ಎಂದು ಹೇಳುತ್ತಾರೆ ಬಸವಣ್ಣನವರು. ಜ್ಞಾನವೆನ್ನುವುದು ಬಹುದೊಡ್ಡ ಬಲ, ಅದು ವ್ಯಕ್ತಿ, ಸಮಾಜಗಳಲ್ಲಿ ತುಂಬಿರುವ ಕತ್ತಲೆಯನ್ನು ಕಳೆಯುವ ದೀವಿಗೆಯೆಂದು ಇದರ ಅರ್ಥ. ಪ್ರಾಚೀನ ಭಾರತೀಯ ಶಿಕ್ಷಣ ಇಂತಹ ಅನೇಕ ದೀವಿಗೆಗಳನ್ನು ಹೊತ್ತಿಸಿದ ದಾಖಲೆಗಳಿವೆ. ಶತಶತಮಾನಗಳಷ್ಟು ಹಿಂದೆಯೇ ಸಾವಿರಾರು ವಿದ್ಯಾರ್ಥಿಗಳಿಗೂ, ನೂರಾರು ಉಪಾಧ್ಯಾಯರಿಗೂ ಆಶ್ರಯವನ್ನಿತ್ತ ನಳಂದಾ, ತಕ್ಷಶಿಲಾ ಮುಂತಾದ ವಿಶ್ವವಿದ್ಯಾಲಯಗಳನ್ನು ಕಟ್ಟಿ ಬೆಳೆಸಿದ ದೇಶ ನಮ್ಮದು. ಅಲ್ಲಿ ಅಧ್ಯಯನ ಮಾಡುತ್ತಿರುವವರಲ್ಲಿ ಅನೇಕ ವಿದೇಶಿ ವಿದ್ಯಾರ್ಥಿಗಳೂ ಇದ್ದರು. ಹಾಗಾಗಿ ಘಟಿಕಾಸ್ಥಾನ, ಸಂಘಾರಾಮ, ಮಠ ಮೊದಲಾದ ಧಾರ್ಮಿಕ ಶಿಕ್ಷಣ ಕೇಂದ್ರಗಳು ಅಲ್ಲಲ್ಲಿ ಬೆಳೆದು ನಿಂತಿದ್ದವು. ಇದು ನಮ್ಮ ಪ್ರಾಚೀನ ಶಿಕ್ಷಣದ ಸ್ವರೂಪ.

ಭಾರತದ ಇತಿಹಾಸದಲ್ಲಿ ತನ್ನದೇ ಆದ ಪಾತ್ರವನ್ನು ವಹಿಸಿದ ಕರ್ನಾಟಕ, ಸುತ್ತಲಿನ ತೆಲುಗು, ತಮಿಳು, ಮಲಯಾಳಿ ಹಾಗೂ ಮರಾಠಿ ಪ್ರಭಾವವನ್ನು ಹಾಗೆಯೇ ದೂರದ ಮುಸಲ್ಮಾನ ಹಾಗೂ ಬ್ರಿಟಿಷರ ದಾಳಿಯನ್ನು ಜೀರ್ಣಿಸಿಕೊಂಡು ಕನ್ನಡವನ್ನು ಎತ್ತಿ ಹಿಡಿದವರು ಇಲ್ಲಿಯ ಜನ. ಈ ಪ್ರದೇಶದಲ್ಲಿ ನೆಲೆಗೊಂಡಿದ್ದ ಒಂದು ಪ್ರಮುಖ ಜನಸಮುದಾಯವೇ ವೀರಶೈವ ಸಮಾಜ.

ವೀರಶೈವರು ಪ್ರಾಚೀನ ಭಾರತದ ಶೈಕ್ಷಣಿಕ ವ್ಯವಸ್ಥೆಗೆ ಹೊಂದಿಕೊಂಡಿದ್ದರಾದರೂ ೧೨ನೆಯ ಶತಮಾನದಷ್ಟು ಹಿಂದೆಯೇ ಮಾನವತಾವಾದಿ ಬಸವಣ್ಣನವರ ನೇತೃತ್ವದಲ್ಲಿ ಸಮಾಜವನ್ನು ಪ್ರಾಪಂಚಿಕ-ಪಾರಮಾರ್ಥಿಕ ಎರಡೂ ನೆಲೆಗಳಲ್ಲಿ ಬಡಿದೆಬ್ಬಿಸುವ ರೀತಿಯಲ್ಲಿ ಒಂದು ಸಮಗ್ರ ಕ್ರಾಂತಿಯನ್ನೇ ಎಸಗಿದ್ದರು. ಈವರೆಗೆ ಘಟಿಕಾಸ್ಥಾನ, ಸಂಘಾರಾಮ, ಮಠಗಳ ಸದಸ್ಯರಿಗೆ ಮಾತ್ರ ಸೀಮಿತವಾಗಿದ್ದ ಅಕ್ಷರಸಂಸ್ಕೃತಿ ಈ ಮಠಗಳ ಫಲವಾಗಿ ಕುಲಜ–ಅಂತ್ಯಜರೆಂಬ, ಸ್ತ್ರೀ–ಪುರುಷರೆಂಬ, ಆಳು–ಅರಸರೆಂಬ ಯಾವ ಬೇಧಭಾವವಿಲ್ಲದೆ ಎಲ್ಲ ಲಿಂಗವಂತರೂ ಒಂದೆಡೆ ಸೇರಿ ಅನೇಕ ಧಾರ್ಮಿಕ, ನೈತಿಕ, ಸಾಮಾಜಿಕ ಸಮಸ್ಯೆಗಳನ್ನು ಕುರಿತು ಅನುಭವಮಂಟಪದಲ್ಲಿ ಚಿಂತನೆಯನ್ನು ನಡೆಸಿದ್ದು ಶ್ಲಾಘನೀಯ ಕಾರ್ಯ.

ಕಾಲಾನುಕ್ರಮದಲ್ಲಿ ಶೋಷಕವರ್ಗದ ಪ್ರಾಬಲ್ಯ, ಪರಕೀಯರ ಆಳ್ವಿಕೆ, ಇದೇ ಮುಂತಾದ ಆತಂಕಗಳಿಂದಾಗಿ, ಈ ನಾಡು ಶರಣರ ಉದಾರವಾದಿ ಶಿಕ್ಷಣ ನೀತಿಯನ್ನು ಕೈಬಿಡುತ್ತ ಬಂದಿತು. ಬ್ರಿಟಿಷರ ಆಗಮನದಿಂದಾಗಿ ಒಂದಿಷ್ಟು ಚಾಲನೆ ದೊರೆತರೂ ಶೈಕ್ಷಣಿಕ ಧ್ಯೇಯ ಧೋರಣೆಗಳು, ಫಲಾನುಭವಿಗಳು ಇತ್ಯಾದಿ ದೃಷ್ಟಿಯಿಂದ ತನ್ನದೇ ಆದ ಮಿತಿಯನ್ನು ಹೊಂದುವಂತಾಯಿತು. ಶೈಕ್ಷಣಿಕವಾಗಿ ತೀರ ಹಿಂದುಳಿದ ಕರ್ನಾಟಕ ವಿಶೇಷತಃ ಉತ್ತರ ಕರ್ನಾಟಕವೆಂದೂ ಕರೆಯಲ್ಪಡುವ ಬೆಳಗಾವಿ, ಧಾರವಾಡ, ಬಿಜಾಪುರ ಮತ್ತು ಕಾರವಾರ ಜಿಲ್ಲೆಗಳಲ್ಲಿ ಅಲ್ಲೊಂದು ಇಲ್ಲೊಂದು ಪ್ರೌಢಶಾಲೆಗಳು, ಸಾಂಗಲಿ, ಪುಣೆ, ಮುಂಬಯಿಗಳಷ್ಟು ದೂರದಲ್ಲಿ ಕಾಲೇಜುಗಳು ಅಸ್ತಿತ್ವಕ್ಕೆ ಬಂದವು. ಈ ಕಡೆ ಮೈಸೂರು, ಆ ಕಡೆ ಮುಂಬಯಿ ಬಿಟ್ಟರೆ ಬೇರೆ ವಿಶ್ವವಿದ್ಯಾಲಯಗಳೇ ಇರಲಿಲ್ಲ.

ವೀರಶೈವ ಸಮಾಜದ ಈ ಅಗತ್ಯತೆಯನ್ನೇ ಪ್ರಮುಖವಾದ ಧ್ಯೇಯವನ್ನಾಗಿಟ್ಟುಕೊಂಡು ಉತ್ತರ ಕರ್ನಾಟಕದ ಆಯಕಟ್ಟಿನ ಸ್ಥಳವಾದ ಬೆಳಗಾವಿಯಲ್ಲೊಂದು ಶಿಕ್ಷಣ ಸಂಸ್ಥೆಗಳ ಸಂಕೀರ್ಣವನ್ನು ನಿರ್ಮಿಸಬೇಕೆಂಬ ಹಂಬಲದೊಂದಿಗೆ ಕೆ.ಎಲ್.ಇ. ಸೊಸೈಟಿಯ ಸಂಸ್ಥಾಪಕರು ಕಾರ್ಯಪ್ರವೃತ್ತರಾದರು.

೧. ಬೆಳಗಾವಿ ಆಗಲೂ ಮುಂಬಯಿ ಕರ್ನಾಟಕದ ನಾಲ್ಕು ಜಿಲ್ಲೆಗಳ ವಿಭಾಗೀಯ ಮುಖ್ಯ ಸ್ಥಳವಾಗಿತ್ತು.

೨. ಧಾರವಾಡದಲ್ಲಿ ಈ ಮೊದಲೇ ಲಿಂಗಾಯತ ಅಭಿವೃದ್ಧಿ ಸಂಸ್ಥೆ ಸ್ಥಾಪನೆಯಾಗಿತ್ತು.

೩. ಕನ್ನಡ ನಾಡಿನ ಒಂದು ಮಗ್ಗುಲಿನ ಗಡಿ ಪ್ರದೇಶವೆಂಬ ಬೆಳಗಾವಿಯ ಖ್ಯಾತಿ ಎಂದಿನಂತೆ ಇಪ್ಪತ್ತನೆಯ ಆದಿಯಲ್ಲಿಯೇ ನಿರ್ಮಾಣವಾಗಿತ್ತು. ಯಾರಾದರೂ ಈ ಗಡಿ ರಕ್ಷಣೆಯ ಹೊಣೆಯನ್ನು ಹೊರಬೇಕಾಗಿತ್ತು.

೪. ಎಲ್ಲಕ್ಕೂ ಮುಖ್ಯವಾದ ಕಾರಣವೆಂದರೆ ಬೆಳಗಾವಿ ಸುಶಿಕ್ಷಿತ ವೀರಶೈವ ಮುಂದಾಳುಗಳಲ್ಲಿ ತುಂಬಿನಿಂತಿದ್ದ ವೀರಶೈವ ಸಮಾಜದ ಬಗೆಗಿನ ಅಭಿಮಾನ ಈ ಸಮಾಜದ ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಅವರು ಹೊಂದಿದ್ದ ಉತ್ಕಟ ಲವಲವಿಕೆ ಈ ಗುಣಗಳೇ ಸಂಸ್ಥೆಯ ಉಗಮಕಾಲದ ನೀರು ಗೊಬ್ಬರಗಳಾಗಿ ಪರಿಣಮಿಸಿದವು.

೫. ಬೆಳಗಾವಿ ಪ್ರದೇಶದಲ್ಲಿ ಕನ್ನಡ ಸಂಸ್ಕೃತಿಯನ್ನು ಕಾಪಾಡುವುದು ಅಭಿವೃದ್ಧಿ ಪಡಿಸುವುದು ಕೂಡ ಸಂಸ್ಥಾಪಕರ ಕನಸಾಗಿತ್ತು.

## ೨.೨ ಶಿಕ್ಷಣ ಪದ್ಧತಿ :ಪಾರಂಪರಿಕ ಹಾಗೂ ಸ್ವಾತಂತ್ರ್ಯಪೂರ್ವದ ಶಿಕ್ಷಣ ಪದ್ಧತಿ

ವೇದಕಾಲೀನ ಶಿಕ್ಷಣ ಪ್ರಾಚೀನ ಭಾರತೀಯರ ಜೀವನವನ್ನು ನೋಡುವ ದೃಷ್ಟಿ ಅವರ ಜೀವನ ಮೌಲ್ಯಗಳ ಪರಿಣಾಮವಾಗಿತ್ತು. ಜ್ಞಾನದ ವಿಷಯವು ಅವರ ಕಲ್ಪನೆಯನ್ನು ಅವಲಂಬಿಸಿತ್ತು. ಸರ್ವಶಕ್ತನಾದ ಪರಮಾತ್ಮನ ಅಸ್ತಿತ್ವದಲ್ಲಿ ಅವರು ಅಚಲ ವಿಶ್ವಾಸ ಇಟ್ಟಿದ್ದರು. ಪುನರ್‌ಜನ್ಮದಲ್ಲಿ ಮತ್ತು ಕರ್ಮಸಿದ್ಧಾಂತದಲ್ಲಿ ನಂಬಿಕೆಯಿಟ್ಟು ಎಲ್ಲವೂ ಅದರಂತೆ ನಡೆಯುವುದೆಂದು ನಂಬಿದ್ದರು. ಅವರ ಜೀವನದ ಧ್ಯೇಯವೆಂದರೆ ಸತ್ಯವನ್ನು ಅರಿಯುವುದು. ಆದ್ದರಿಂದ ಶಿಕ್ಷಣದ ಗುರಿಯು ಆಧ್ಯಾತ್ಮಿಕ ಜ್ಞಾನದ ಪರಿಚಯ ಮಾಡಿಕೊಟ್ಟು ಮುಕ್ತಿಯನ್ನು ಪಡೆಯಲು ಸಹಾಯ ಮಾಡುವಂತಹದಾಗಿತ್ತು. "ನಶ್ವರ ಜಗತ್ತಿನಿಂದ ಮನಸ್ಸನ್ನು ವಿಮುಖಗೊಳಿಸಿ ಶಾಶ್ವತವಾದ ಸತ್ಯದಲ್ಲಿ ಕೇಂದ್ರೀಕರಿಸಲು ಸಹಾಯ ಮಾಡುವುದೇ ಶಿಕ್ಷಣ" ಎಂದು ವೇದಕಾಲೀನ ಭಾರತೀಯರ ಕಲ್ಪನೆಯಾಗಿತ್ತು.

**ಜ್ಞಾನಾರ್ಜನೆ :** ಬ್ರಾಹ್ಮಣರ ಕಾಲದಲ್ಲಿ ಶಿಕ್ಷಣ ಇಲ್ಲದ ವ್ಯಕ್ತಿಯನ್ನು ಪಶುಸಮಾನವೆಂದು ಪರಿಗಣಿಸುತ್ತಿದ್ದರಿಂದ ಶಿಕ್ಷಣಕ್ಕೆ ಅವರು ಮಹತ್ವದ ಸ್ಥಾನವನ್ನು ಕೊಟ್ಟಿದ್ದರು. ಪ್ರಾಪಂಚಿಕ ಜ್ಞಾನದ ಜೊತೆಗೆ ಮೋಕ್ಷಸಾಧನೆಗೆ ಅತೀ ಹೆಚ್ಚಿನ ಗಮನ ನೀಡಲಾಗಿತ್ತು.

- ಸರ್ವತೋಮುಖ ವ್ಯಕ್ತಿತ್ವ ಬೆಳವಣಿಗೆ : ವ್ಯಕ್ತಿಯ ದೈಹಿಕ, ಬೌದ್ಧಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ಬೆಳವಣಿಗೆಗೆ ಸರಿಯಾದ ಗಮನ ನೀಡಲಾಗುತ್ತಿತ್ತು.
- ಚಾರಿತ್ರಿಕ ನಿರ್ಮಾಣ: ಶಿಕ್ಷಣದ ಪ್ರಮುಖ ಗುರಿ ವಿದ್ಯಾರ್ಥಿಗಳಲ್ಲಿ ಉತ್ತಮ ಚಾರಿತ್ರ್ಯ ಉತ್ತಮ ನಡವಳಿಕೆ ನಿರ್ಮಲವಾದ ಮನಸ್ಸು, ಸ್ವನಿಯಂತ್ರಣ ಮುಂತಾದ ಅಂಶಗಳನ್ನು ಬೆಳೆಸುವುದಾಗಿತ್ತು.
- ರಾಷ್ಟ್ರೀಯ ಸಂಸ್ಕೃತಿಯ ಬೆಳವಣಿಗೆ ಮತ್ತು ಉಳಿಸುವಿಕೆ, ಪೌರಪ್ರಜ್ಞೆ ಮತ್ತು ಸಾಮಾಜಿಕ ಮೌಲ್ಯಗಳನ್ನು ಬೆಳೆಸುವುದಾಗಿತ್ತು.
- ಸ್ವಕೇಂದ್ರಿತ ವ್ಯಕ್ತಿತ್ವದಿಂದ ದೂರವಾದ ದಯೆ, ಅನುಕಂಪದಿಂದ ವ್ಯಕ್ತಿ ನಿರ್ಮಿಸುವುದಾಗಿತ್ತು.
- ಪವಿತ್ರ ಶಿಕ್ಷಣದ ಬೆಳವಣಿಗೆಯೇ ಮೂಲ ಧ್ಯೇಯವಾಗಿತ್ತು.
- ಬೌದ್ಧ ತತ್ವಗಳ ಪ್ರಸಾರ ಹಾಗೂ ಬೋಧನೆ.

- ಇಸ್ಲಾಂ ಧರ್ಮದ ಪ್ರಸಾರ.
- ಸಾಮಾಜಿಕ ನೀತಿ ನಿಯಮಗಳ ಬೆಳವಣಿಗೆ ಇದರ ಮತ್ತೊಂದು ಧ್ಯೇಯವಾಗಿತ್ತು.
- ಭೌತಿಕ ಪ್ರಗತಿಯನ್ನು ಅಣಿಗೊಳಿಸುವಂತಿತ್ತು.

ಇಷ್ಟೆಲ್ಲಾ ಮೂಲಭೂತ ಅವಶ್ಯಕತೆಗಳನ್ನು ಪಡೆದುಕೊಂಡ ಶಿಕ್ಷಣ ಪದ್ಧತಿ ಈ ರೀತಿಯಾಗಿತ್ತು.

**ಉಪನಯನ :** ನಾಲ್ಕರಿಂದ ೬ ವರ್ಷ ಅವಧಿಯಲ್ಲಿ ಮಕ್ಕಳಿಗೆ ಉಪನಯನ ಸಮಾರಂಭ ಏರ್ಪಡಿಸಲಾಗುತ್ತಿತ್ತು. ನಂತರ ಗುರುಕುಲಕ್ಕೆ ವಿದ್ಯಾಭ್ಯಾಸಕ್ಕಾಗಿ ಕಳಿಸಿಕೊಡಲಾಗುತ್ತಿತ್ತು.

**ಗುರುಕುಲ ಪದ್ಧತಿ :** ವಿದ್ಯಾರ್ಥಿಗಳು ಗುರುಕುಲಗಳಲ್ಲಿಯೇ ವಾಸಿಸುತ್ತಿದ್ದರು. ಆಶ್ರಮದ ಕೆಲಸಗಳನ್ನು ಗುರುಕುಲದ ಪ್ರದೇಶವನ್ನು ಶುಚಿಯಾಗಿಡುವುದು, ಸೌದೆ ತರುವುದು, ನೀರನ್ನು ತರುವುದು, ಯಜ್ಞಯಾಗಾದಿಗಳಿಗೆ ಹೂವು ಹಣ್ಣುಗಳನ್ನು ಕಾಡಿನಿಂದ ತರುವುದು ಮತ್ತು ಪೂಜಾ ತಯಾರಿ ನಡೆಸುವದು, ಭಿಕ್ಷೆ ಬೇಡಿ ಆಹಾರ ತರುವುದು, ಆಶ್ರಮದ ದನಕರುಗಳನ್ನು ಮೇಯಿಸಿಕೊಂಡು ಬರುವುದು ಮುಂತಾದ ಕೆಲಸಗಳನ್ನು ಮಾಡಬೇಕಾಗಿತ್ತು. ವಿದ್ಯಾರ್ಥಿಗಳು ಸರಳ ಜೀವನವನ್ನೇ ನಡೆಸಬೇಕಾಗಿತ್ತು.

**ಬ್ರಹ್ಮಚರ್ಯ :** ಇಂದ್ರಿಯಗಳ ಮತ್ತು ಮನಸ್ಸಿನ ನಿಯಂತ್ರಣವು ಉಪನಯನದ ನಂತರ ಕಡ್ಡಾಯವಾಗಿತ್ತು. ಆ ಮೂಲಕ ಬ್ರಹ್ಮಚರ್ಯವನ್ನು ಕಡ್ಡಾಯವಾಗಿ ನಿಭಾಯಿಸಲಾಗುತ್ತಿತ್ತು.

ಮೌಖಿಕ ಪದ್ಧತಿ, ಚರ್ಚೆ, ಗೋಷ್ಠಿ, ವಿಚಾರ ಸಂಕಿರಣ, ಸಭೆ, ಉಪನ್ಯಾಸ ಪದ್ಧತಿ, ಅನುಗಮನ ಪದ್ಧತಿ, ಪ್ರಾಯೋಗಿಕ ಪದ್ಧತಿ, ಪ್ರವಾಸಿ ಪದ್ಧತಿ, ಮುಂತಾದವುಗಳನ್ನು ಅಳವಡಿಸಿಕೊಂಡು ಶಿಕ್ಷಣ ನೀಡಲಾಗುತ್ತಿತ್ತು.

೧. ಗುರು-ಶಿಷ್ಯರ ನಡುವಿನ ಸಂಬಂಧ ತೃಪ್ತಿಕರವಾಗಿತ್ತು. ಶಿಷ್ಯನು ಗುರುವನ್ನು ತನ್ನ ಪಿತೃಸಮಾನನಂತೆ ಕಾಣುತ್ತಿದ್ದನು.

೨. ಶಿಕ್ಷಣವು ಧಾರ್ಮಿಕ ವಿಷಯವಾಗಿ ಹೆಚ್ಚಿನ ಮಹತ್ವವನ್ನು ನೀಡಿದ್ದರೂ ಸಮಾಜದ ಪ್ರಗತಿಯನ್ನು ನಿರ್ಲಕ್ಷಿರಲಿಲ್ಲ.

೩. ಪ್ರಾಯೋಗಿಕ, ಬೌದ್ಧಿಕ ಮತ್ತು ನೈತಿಕ ಶಿಕ್ಷಣದ ಜೊತೆಗೆ ಶಿಸ್ತು, ಸಂಯಮವನ್ನು ಕಲಿಸಿಕೊಡಲಾಗಿತ್ತು.

೪. ಸುಸಂಘಟಿತವಾದ ಸರ್ವ ಅನುಕೂಲತೆಗಳನ್ನು ಹೊಂದಿದ ವಿಶಾಲವಾದ ಬೌದ್ಧ ವಿಹಾರಗಳಲ್ಲಿ ಶಿಕ್ಷಣವನ್ನು ನೀಡಲಾಗುತ್ತಿತ್ತು.

೫. ಬೌದ್ಧಧರ್ಮದ ಕಾಲದಲ್ಲಿ ಶಿಕ್ಷಣಕ್ಕಾಗಿ ವಿಶಾಲವಾದ ಕಟ್ಟಡಗಳನ್ನು ನಿರ್ಮಿಸುವ ಮನೋಭಾವ ಪ್ರಾರಂಭವಾಯಿತು.

೬. ಶಿಕ್ಷಣವು ಜೀವನದ ಸಮಸ್ಯೆಗಳನ್ನು ಸಂಬಂಧ ಹೊಂದಿದ್ದು ಅವುಗಳ ಪರಿಹಾರಕ್ಕಾಗಿ ಶ್ರಮಿಸುತ್ತಿತ್ತು. ಶಿಕ್ಷಣವು ಕಾಲ ಮತ್ತು ಪ್ರದೇಶದ ಅವಶ್ಯಕತೆಗೆ ಅನುಗುಣವಾಗಿತ್ತು.

೭. ಸ್ತ್ರೀ ಶಿಕ್ಷಣಕ್ಕೆ ಸಾಕಷ್ಟು ಪ್ರಾಮುಖ್ಯತೆಯನ್ನು ಕೊಡಲಾಯಿತು.

ಮುಸ್ಲಿಂ ಕಾಲಕ್ಕೆ ಬಂದಾಗ ಶಿಕ್ಷಣವನ್ನು ಮುಖ್ಯವಾಗಿ ಶಿಕ್ಷಣ ಪದ್ಧತಿಯ ವಿಧಾನವು ಈ ರೀತಿಯಾಗಿತ್ತು.

ಅ. ಮುಕ್ತಬ (ಪ್ರಾಥಮಿಕ ಶಿಕ್ಷಣ)

ಬ. ಉನ್ನತ ಮುಕ್ತಬ (ಮಾಧ್ಯಮಿಕ ಶಾಲೆ)

ಕ. ಮದರಸಾ (ಉನ್ನತ ಶಿಕ್ಷಣ) – ಈ ರೀತಿಯಾಗಿತ್ತು.

ಇನ್ನು ಬೋಧನಾ ಪದ್ಧತಿಗಳನ್ನು ಗಮನಿಸಿದಾಗ,

೧. ಮೌಖಿಕ ಪದ್ಧತಿ.

೨. ಕಂಠಪಾಠ ಮಾಡುವ ಪದ್ಧತಿ.

೩. ಅಕ್ಬರನು ಜಾರಿಗೊಳಿಸಿದ ವೈಜ್ಞಾನಿಕ ಪದ್ಧತಿ.

೪. ಗ್ರೀಕ್ ಸಾಹಿತ್ಯ ಕೃತಿಗಳನ್ನು ಉರ್ದುವಿಗೆ ಭಾಷಾಂತರ ಮಾಡಿ ಕಲಿಸುವ ಪದ್ಧತಿ.

೫. ಸ್ವ–ಅಧ್ಯಯನ ಪದ್ಧತಿ – ಉರ್ದುಭಾಷೆ ಅಭಿವೃದ್ಧಿ ಹೊಂದಿತು.

೬. ಹಿರೇಮಣಿ ಪದ್ದತಿ. ಈ ರೀತಿಯ ಶಿಕ್ಷಣ ಪದ್ಧತಿಯನ್ನು ಹೊಂದಿತ್ತು.

**೨.೩ ಶಿಕ್ಷಣದ ಮಾಧ್ಯಮ :**

ವೇದಕಾಲದ ಶಿಕ್ಷಣ ಪದ್ಧತಿಯಲ್ಲಿ ಸಂಸ್ಕೃತ ಭಾಷೆ ಅತ್ಯಂತ ಪ್ರಾವೀಣ್ಯತೆಯನ್ನು ಪಡೆದಿತ್ತು. ಅಲ್ಲದೇ ವೇದ ಮಂತ್ರಗಳ ಪಠ್ಯ ಅವಶ್ಯಕವಾಗಿತ್ತು. ಉಪನಿಷತ್ತುಗಳ ಕಲಿಕೆ ಲೌಕಿಕ ಮತ್ತು ಆಧ್ಯಾತ್ಮಿಕ ಅಂಗಗಳನ್ನು ಪರಿಚಯಿಸುವುದು ಸಂಸ್ಕೃತ ಭಾಷೆಯಲ್ಲಿಯೇ ಆಗಿತ್ತು.

ಪ್ರಾಚೀನರ ದೃಷ್ಟಿಯಲ್ಲಿ "ವಾದ ಮಂತ್ರಗಳ ಅರ್ಥ ತಿಳಿಯದವ, ಚಕ್ಕಡಿಗಟ್ಟಲೆ ಗಂಧದ ತುಂಡಿನ ಭಾರ ಹೊತ್ತು ಅದರ ಸುವಾಸನೆಯನ್ನರಿಯದ ಕತ್ತೆಯೆಂದು" ಪರಿಗಣಿಸಲ್ಪಡುತ್ತಿದ್ದನು. ಅಲ್ಲದೇ "ಶರೀರಂ ಆದ್ಯಕರು ಧರ್ಮ ಸಾಧನಂ" ಎಂಬ ಹೇಳಿಕೆಯ ಅರ್ಥವನ್ನು ಪ್ರಾಚೀನರು ಅರಿತಿದ್ದರು. ಇವರ ಮಾಧ್ಯಮ ಪಾಳೀ.

ಬೌದ್ಧರ ಕಾಲಘಟ್ಟದಲ್ಲಿ ಶಿಕ್ಷಣದ ಮಾಧ್ಯಮವು ಬ್ರಾಹ್ಮಣ ಶಿಕ್ಷಣದ ಮಾದರಿಯ ಮಾಧ್ಯಮಕ್ಕಿಂತ ಶ್ರೇಷ್ಠ ಎಂದು ಹೇಳಬಹುದು. ಬ್ರಾಹ್ಮಣರು ವೇದಗಳಲ್ಲಿ ತಮ್ಮ ಭಾಷೆಯನ್ನು ಪ್ರಚುರಪಡಿಸಿದರೆ ಬೌದ್ಧರು ಅಷ್ಟಾಂಗಮಾರ್ಗಗಳನ್ನು ಬೋಧಿಸಿದರು.

ಮುಸ್ಲಿಂ ಶಿಕ್ಷಣ ಪದ್ಧತಿಯನ್ನು ನೋಡಿದಾಗ ಉರ್ದು ಭಾಷೆ ಅತ್ಯಂತ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುವುದರ ಮೂಲಕ ತಮ್ಮ ಭಾಷೆಯಲ್ಲಿ ಶಿಕ್ಷಣದ ಉನ್ನತ ಮಾಧ್ಯಮವನ್ನು ಪ್ರಬಲಪಡಿಸಿಕೊಂಡು ತಮ್ಮ ಶಿಕ್ಷಣದ ಪ್ರಸಾರವನ್ನು ಮಾಡಿದರು.

**೨.೪ ವಿದ್ಯಾಭ್ಯಾಸದ ಅವಕಾಶ :**

ವೇದಕಾಲದಲ್ಲಿ ಶಿಕ್ಷಣದ ವಿದ್ಯಾಭ್ಯಾಸಕ್ಕೆ ವಿದ್ಯಾರ್ಥಿಗಳಿಗೆ ಅವಕಾಶವನ್ನು ಈ ರೀತಿಯಾಗಿ ಕಲ್ಪಿಸಿಕೊಡಲಾಗಿತ್ತು. ಉಪನಯನ, ಗುರುಕುಲ ಪದ್ಧತಿ, ಬ್ರಹ್ಮಚರ್ಯ ಕಡ್ಡಾಯವಾಗಿತ್ತು. ವಿದ್ಯಾರ್ಥಿಗಳಿಗೆ ತಮ್ಮ ಅಭಿರುಚಿಗೆ ತಕ್ಕಂತೆ ತಕ್ಕ ವಿಷಯಗಳನ್ನು ಅಧ್ಯಯನ ಮಾಡಲು ಅವಕಾಶ ಮಾಡಿಕೊಡಲಾಗಿತ್ತು.

ಬೌದ್ಧರ ಕಾಲಕ್ಕೆ ಬಂದಾಗ ಪಟ್ಟಜ, ಸದ್ಯದ ಶಿಕ್ಷಣಕ್ಕೆ ಯಾವ ರೀತಿ ಪ್ರವೇಶಕ್ಕೆ ಕೆಲವು ನೀತಿ ನಿಯಮಗಳನ್ನು ಅನುಕರಣೀಯವೆನಿಸಬಹುದಾದ ಸಹಪ್ರವೇಶ ನಿಯಮಗಳಿದ್ದವು. ಬೌದ್ಧಶಿಕ್ಷಣಕ್ಕೆ ಪ್ರವೇಶಕ್ಕೆ ನೀಡುವ ಧೀಕ್ಷೆಗೆ 'ಪಟ್ಟಜ' ಎಂದು ಹೆಸರು ಇತ್ತು. ಒಟ್ಟಿನಲ್ಲಿ ಪಟ್ಟಜ ಎಂದರೆ – ವಿದ್ಯಾರ್ಥಿಯು ಪೂರ್ವಸಿದ್ಧತೆಯಿಂದ ಹೊರಬರುವುದು. ವಿದ್ಯಾರ್ಥಿಗಳನ್ನು ಶ್ರಮಣರೆಂದು ಕರೆಯುತ್ತಿದ್ದರು. ಹಳದಿ ವಸ್ತ್ರಗಳಿಂದಲೂ ಅಲಂಕೃತವಾದ ವಿದ್ಯಾರ್ಥಿಯು "ಬುದ್ಧಂ ಶರಣಂ ಗಚ್ಛಾಮಿ" "ಧರ್ಮ ಶರಣಂ ಗಚ್ಛಾಮಿ", "ಸಂಘಂ ಶರಣಂ ಗಚ್ಛಾಮಿ" ಎಂಬ ಮೂರು ಪ್ರಮಾಣಗಳನ್ನು ಸ್ವೀಕರಿಸಬಹುದಿತ್ತು.

ಸುಮಾರು ೧೦–೧೨ ವರ್ಷಗಳಾದ ನಂತರ ಶಿಕ್ಷಣ ಪಡೆಯದ ಮೇಲೆ ಪೂರ್ಣಕಾಲದ ಬ್ರಹ್ಮಚಾರಿಯಾದಾಗ ಉಪಸಾಂಪದ ಎಂಬ ಸಮಾರಂಭವು ಜರುಗಿ ಶ್ರಮಣರು ಬಿಕ್ಷುಗಳಾಗಿ ಹೊರಬರುತ್ತಿದ್ದರು.

**೨.೫ ಪ್ರಮುಖ ಶಾಲಾ-ಕಾಲೇಜುಗಳು :**

ಸ್ವಾತಂತ್ರ್ಯಪೂರ್ವದಲ್ಲಿ ಕೆಲವು ಶಿಕ್ಷಣ ಸಂಸ್ಥೆಗಳು ಕರ್ನಾಟಕದ ಶೈಕ್ಷಣಿಕ ಉನ್ನತಿಗಾಗಿ ಶ್ರಮಿಸಿದವುಗಳಾಗಿವೆ. ಅವುಗಳಲ್ಲಿ ಕೆಲವುಗಳು.

೧. ಜಿ.ಎ. ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯ, ಬೆಳಗಾವಿ, ೧೯೧೬.

೨. ಆರ್.ಎಲ್.ಎಸ್. ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯ, ಧಾರವಾಡ, ೧೯೨೨.

೩. ಎಸ್.ಕೆ. ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯ, ಗೋಕಾಕ, ೧೯೩೫.

೪. ಲಿಂಗರಾಜ ಮಹಾವಿದ್ಯಾಲಯ, ಬೆಳಗಾವಿ, ೧೯೩೩.

೫. ಜಗದ್ಗುರು ಗಂಗಾಧರ ವಾಣಿಜ್ಯ ಮಹಾವಿದ್ಯಾಲಯ, ಹುಬ್ಬಳ್ಳಿ, ೧೯೪೪.

೬. ಬಿ.ವಿ.ಭೂಮರೆಡ್ಡಿ ಇಂಜಿನೀಯರಿಂಗ್ ಮಹಾವಿದ್ಯಾಲಯ, ಹುಬ್ಬಳ್ಳಿ, ೧೯೪೨.

೭. ಬಿ.ಎಸ್. ಹಂಚಿನಾಳ ಪ್ರಾಥಮಿಕ ಶಾಲೆ, ಬೆಳಗಾವಿ, ೧೯೪೩.

೮. ಅಣ್ಣಪ್ಪ ಕಾಡಾದಿ ಹೈಸ್ಕೂಲ, ಸೊಲ್ಲಾಪುರ, ೧೯೩೭.

೯. ಸಿಲ್ವರ್ ಜ್ಯುಬ್ಲಿ ಹೈಸ್ಕೂಲ, ಬಾರ್ಸಿ, ೧೯೪೧.

೧೦. ಶಿ.ಶಿ. ಬಸವನಾಳ ಐ.ಟಿ.ಐ., ಬೆಳಗಾವಿ, ೧೯೪೦.

೧೧. ಜೆ.ಟಿ. ಐ.ಟಿ.ಐ., ಹುಬ್ಬಳ್ಳಿ, ೧೯೪೭.

**೨.೬ ಒಟ್ಟು ಶೈಕ್ಷಣಿಕ ಪರಿಸರ :**

ಪ್ರಾಚೀನ ಕಾಲದಲ್ಲಿ ಶಿಕ್ಷಣವೆಂದರೆ ಧರ್ಮತತ್ವಗಳ ಅಭ್ಯಾಸವಾಗಿದ್ದು, ಅದು ಆಯಾ ಧರ್ಮೀಯರಿಗೆ ಸೀಮಿತವಾಗಿದ್ದಿತು. ಹೀಗೆ ಕೆಲವರಿಗೆ ಮಾತ್ರ ಸೀಮಿತವಾಗಿದ್ದ ಶಿಕ್ಷಣ ಕ್ಷೇತ್ರವನ್ನು ಈ ನಾಡಿನಲ್ಲಿ ಮೊತ್ತ ಮೊದಲು ಸಾರ್ವತ್ರಿಕಗೊಳಿಸಿದವರು ೧೨ನೆಯ ಶತಮಾನದ ಶರಣರು. ಇವರು ಅಸ್ಪೃಶ್ಯರ ಮನೆ ಮನೆಗೂ ಅಕ್ಷರ ಶಿಕ್ಷಣ ವಿಸ್ತರಿಸಿದ ಫಲವಾಗಿ, ಮಾದರ ಚೆನ್ನಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಹೊಲೆಯರ ಊರಿಲಿಂಗ ಪೆದ್ದಿ ಮೊದಲಾದ ಅಸ್ಪೃಶ್ಯ ಪುರುಷರು, ಕಾಳವ್ವೆಯಂಥ ಅಸ್ಪೃಶ್ಯ ಮಹಿಳೆಯರು ಸುಶಿಕ್ಷಿತರಾಗಿ ಸುಸಂಸ್ಕೃತರಾಗಿ ಬೆಳೆದು ವಚನ ಸಾಹಿತ್ಯವನ್ನು ಬೆಳೆಸಿದರು.

ದುರ್ದೈವದ ಸಂಗತಿಯೆಂದರೆ, ತರುವಾಯದ ದಿನಗಳಲ್ಲಿ ಪ್ರಭುವರ್ಗ, ಪುರೋಹಿತವರ್ಗ, ಪುರುಷವರ್ಗಗಳು ಮತ್ತೆ ಪ್ರಬಲವಾಗಿ ಪ್ರಜಾವರ್ಗ, ಭಕ್ತವರ್ಗ, ಸ್ತ್ರೀವರ್ಗಗಳನ್ನು ಅಕ್ಷರ ಸಂಸ್ಕೃತಿಯಿಂದ ವಂಚಿತಗೊಳಿಸಿದವು. ಹೀಗಿದ್ದಾಗ್ಯೂ ವಿದ್ಯಾರ್ಥಿಗಳಿಗಾಗಿ ಸಾಲಿಮಠಗಳನ್ನು ಯುವಕರಿಗಾಗಿ ಸಂಜೆ ಮಠಗಳನ್ನು ಸ್ಥಾಪಿಸುತ್ತ ಬರುವ ಮೂಲಕ 'ಸಾರ್ವಜನಿಕ ಶಿಕ್ಷಣ' ವ್ಯವಸ್ಥೆಯನ್ನು ೧೯ನೆಯ ಶತಮಾನದವರೆಗೂ ಬದುಕಿಸುತ್ತ ಬಂದಿದ್ದ ಶಿಕ್ಷಣ ಸಂಸ್ಥೆಗಳು ಪ್ರಬಲವಾದವು. ತದನಂತರದಲ್ಲಿ ಕೆ.ಎಲ್.ಇ. ಸಂಸ್ಥೆ ವಿಜಾಪುರದ ಬಿ.ಎಲ್.ಡಿ. ಸಂಸ್ಥೆ, ಧರ್ಮಸ್ಥಳದ ಎಸ್.ಡಿ.ಎಂ. ಹಾಗೂ ಬಾಗಲಕೋಟೆಯ ಬಸವೇಶ್ವರ ಸಂಸ್ಥೆ ಹೀಗೆ ಹಲವಾರು ಸಂಸ್ಥೆಗಳು ಹುಟ್ಟಿಕೊಂಡು ಶೈಕ್ಷಣಿಕವಾಗಿ ಅಷ್ಟೇ ಅಲ್ಲದೆ ಸಾಮಾಜಿಕವಾಗಿ, ಸಾಹಿತ್ಯಿಕವಾಗಿ ಕಾರ್ಯಗಳನ್ನು ಮಾಡುತ್ತಾ ಸಾಗುತ್ತಿವೆ.